ಹೆಗ್ಗನಹಳ್ಳಿ, ಹೊಸಹಳ್ಳಿ ಮತ್ತು ಹೆಚ್. ಜಿ. ಆರ್. ಹೈಗ್ರೌಂಡ್ಸ್ ಸ್ಥಳಗಳಲ್ಲಿ ನೀರು ಸರಬರಾಜು ಅಡಚಣೆ ಇಲ್ಲದೆ ಕಾರ್ಯ ನಿರ್ವಹಿಸಲು ವಿದ್ಯುತ್ ಜನರೇಟರ್‌ಗಳನ್ನು ಅಳವಡಿಸಲಾಗಿದೆ.

3. ನಗರದಲ್ಲಿ 7,477 ಸಾರ್ವಜನಿಕ ಕೊಳಾಯಿಗಳಿದ್ದು ಇವುಗಳಿಂದಲೂ ಸಹ ನಾಗರೀಕರಿಗೆ ನೀರು ಸರಬರಾಜಾಗುತ್ತಿರುತ್ತದೆ.

4. ಮಲಿನ ನೀರನ್ನು ತೃತೀಯ ದರ್ಜೆಗೆ ಸಂಸ್ಕರಿಸಿ ತೋಟಗಾರಿಕೆ, ನೆಲ ಶುಚಿಗೊಳಿಸಲು ಇತರೆ ಕೆಲಸಗಳಿಗೆ ಉಪಯೋಗಿಸಲು ಜಲಮಂಡಳಿಯ ಸಂಸ್ಕರಣಾ ಘಟಕಗಳಿಂದ ಸರಬರಾಜು ಮಾಡಲಾಗುತ್ತಿರುತ್ತದೆ.

5) ಕೊಳವೆ ಬಾವಿಗಳನ್ನು ಸದಾ ಸುಸ್ಥಿತಿಯಲ್ಲಿಡಲು ಖಾಸಗಿ ಸಂಸ್ಥೆಗಳಿಗೆ ಕಾರ್ಯ ನಿರ್ವಹಿಸಿರುತ್ತದೆ.

ಇ) ಮುಂಬರುವ ಬೇಸಿಗೆಯನ್ನು ಗಮನದಲ್ಲಿರಿಸಿಕೊಂಡು, ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಹಾಲಿ ಶೇಖರಣೆ ಇರುವ ನೀರನ್ನು ಮುಂದಿನ ಮುಂಗಾರು ಮಳೆ ಪ್ರಾರಂಭವಾಗುವವರೆಗೂ ಸರಬರಾಜು ಮಾಡಲು ಅತೀ ಜಾಗರೂಕತೆಯಿಂದ ಬಳಸಲಾಗುತ್ತಿದೆ. ಮಹಾಲಕ್ಷ್ಮೀ ಬಡಾವಣೆಗೆ ಕಾವೇರಿ ನೀರನ್ನು 4ನೇ ಹಂತ, 1ನೇ ಘಟ್ಟದ ಯೋಜನೆಯಡಿ ನಿರ್ಮಿಸಿರುವ ಹೆಗ್ಗನಹಳ್ಳಿ ಜಲಾಶಯದಿಂದ ಶ್ರೀಗಂಧ ಕಾವಲ್ ಜಲಾಶಯಕ್ಕೆ ಪಂಪ್ ಮಾಡಿ ತದನಂತರ ಇಲ್ಲಿಂದ ಕೇತಮಾರನಹಳ್ಳಿ ಜಲಾಶಯಕ್ಕೆ ಪಂಪ್ ಮಾಡಿ, ಕೇತಮಾರನ ಹಳ್ಳಿ ಜಲಾಶಯದಿಂದ ನಂದಿನಿ ಬಡಾವಣೆಯಲ್ಲಿರುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಈ) ಇಲ್ಲ.

ಬೆಂಗಳೂರು ಮಹಾನಗರ ಹೊರವಲಯದಲ್ಲಿ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ

64(167) ಶ್ರೀ ನೆ. ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರ ಮತ್ತು ಹೊರವಲಯದಲ್ಲಿ ಎಷ್ಟು ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದೆ (ವಿವರ ನೀಡುವುದು);

ಆ) ಸರ್ಕಾರ ಈ ಯೋಜನೆಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಿದೆ ಹಾಗೂ ಎಷ್ಟು ಹಣ ಬಿಡುಗಡೆ ಮಾಡಲು ಬಾಕಿ ಇದೆ? (ವಿವರ ನೀಡುವುದು);

ಇ) ಯೋಜನೆಗಳನ್ನು ತೆಗೆದುಕೊಂಡಿರುವ ಗುತ್ತಿಗೆದಾರರಿಗೆ ಬಿಲ್‌ಗಳನ್ನು ಪಾವತಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಎಷ್ಟು ಮೊತ್ತ ಬಿಡುಗಡೆ ಮಾಡಲು ಬಾಕಿ ಇದೆ? (ವಿವರ ಒದಗಿಸುವುದು);

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ಮಹಾನಗರದಲ್ಲಿ ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಯಾದ ಜವಹರ್‌ಲಾಲ್ ನೆಹರೂ ರಾಷ್ಟ್ರೀಯ ನವೀಕರಣ ಯೋಜನೆಗಳು (JNNURM) ಯನ್ನು ಜಾರಿಗೊಳಿಸಲಾಗುತ್ತಿದೆ. ಇದರಡಿ 17 ಯೋಜನೆಗಳನ್ನು ರೂ. 977.02 ಕೋಟಿ ವೆಚ್ಚದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ವಿವರಗಳನ್ನು ಅನುಬಂಧ –1 ರಲ್ಲಿ ಲಗತ್ತಿಸಿದೆ.

ಇ) ಹೌದು.

ಈ) ಉದ್ಭವಿಸುವುದಿಲ್ಲ.

ಅನುಬಂಧ –1

ಕಾಮಗಾರಿ ಹೆಸರು	ಅನುಮೋದಿತ ಮೊತ್ತ	ಪಡೆದ ಅನುದಾನ	ಬಿಡುಗಡೆ ಮಾಡ ಬೇಕಾದ ಅನುದಾನ
ವೃಷಭಾವತಿ ಕಣಿವೆ	228.26	85.59	28.53
ಚಲ್ಲಘಟ್ಟ ಕಣಿವೆ	118.57	29.64	29.63
ಹೆಬ್ಬಾಳ ಕಣಿವೆ	184.74	69.27	23.09
ಕೋರಮಂಗಲ ಕಣಿವೆ	111.49	41.80	13.94
ಮಲ್ಲೇಶ್ವರಂ ವೃತ್ತ	12.45	5.13	1.55
ಟಾಗೂರ್ ವೃತ್ತ	17.55	2.19	6.58
ಗಾಳಿ ಆಂಜನೇಯ ವೃತ್ತ	31.93	9.18	7.97
ಯಶವಂತಪುರ ವೃತ್ತ	21.57	8.90	2.69
ಹೆಣ್ಣೂರು ಬಾಣಸವಾಡಿ ರಸ್ತೆ	25.43	7.30	6.36
ಕದಿರೇನಹಳ್ಳಿ ರಿಂಗ್ ರೋಡ್	24.86	7.14	6.22
ಪುಟ್ಟೇನಹಳ್ಳಿ ರಿಂಗ್‌ರೋಡ್	22.84	6.57	5.70

ಸಿ.ಎನ್.ಆರ್. ರಾವ್ ವೃತ್ತ	22.60	3.67	8.48
ಎಂ. ಜಿ.ರಸ್ತೆ	43.61	17.99	5.45
3 ಕೊಳಚೆ ಪ್ರದೇಶ ಅಭಿವೃದ್ಧಿ ಕಾಮಗಾರಿ	4.38	1.96	1.96
2 ಕೊಳಚೆ ಪ್ರದೇಶ ಅಭಿವೃದ್ಧಿ ಕಾಮಗಾರಿ	5.34	2.40	2.40
13 ಕೊಳಚೆ ಪ್ರದೇಶ ಅಭಿವೃದ್ಧಿ ಕಾಮಗಾರಿ	50.88	10.26	35.53
ಒಟ್ಟು ಮೊತ್ತ	**977.02**	**329.88**	**192.38**

ರಾಜ್ಯದಲ್ಲಿ ಕ್ರೀಡೆಗಳನ್ನು ಅಧಿಕೃತವಾಗಿ ಗುರುತಿಸಿರುವುದು

65(168) ಶ್ರೀ ನೆ. ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಯಾವ ಯಾವ ಕ್ರೀಡೆಗಳನ್ನು ಯುವಜನ ಸೇವಾ ಇಲಾಖೆಯಿಂದ ಅಧಿಕೃತವಾಗಿ ಗುರುತಿಸಲಾಗಿದೆ?

ಆ) ಕಳೆದ ಮೂರು ವರ್ಷಗಳಿಂದ ಯಾವ ಯಾವ ಕ್ರೀಡಾ ಕ್ಷೇತ್ರದಲ್ಲಿ ಎಷ್ಟು ಕ್ರೀಡಾಪಟುಗಳನ್ನು ಗುರುತಿಸಿದೆ; ಹಾಗಿದ್ದಲ್ಲಿ ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಕ್ರೀಡೆಗಳಿಗೆ ಎಷ್ಟು ಕ್ರೀಡಾಪಟುಗಳನ್ನು ಕಳುಹಿಸಿಕೊಡಲಾಗಿದೆ? (ಅವರುಗಳ ಹೆಸರು ಮತ್ತು ವಿಳಾಸ ಹಾಗೂ ಕ್ರೀಡಾವಾರು ಮಾಹಿತಿ ಒದಗಿಸುವುದು)

ಇ) ಯುವಜನ ಸೇವಾ ಇಲಾಖೆಯಲ್ಲಿ ತರಬೇತಿದಾರರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು):

ಅ) ಯುವ ಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ರಾಜ್ಯದಲ್ಲಿ ಅಧಿಕೃತವಾಗಿ ಗುರುತಿಸಲಾದ ಕ್ರೀಡೆಗಳ ವಿವರ ಈ ಕೆಳಕಂಡಂತಿದೆ.